ಮಾಡುವುದಕ್ಕೆ ಬರುವುದಿಲ್ಲ. ನೀವು ಏನಾದರೂ ಮಾತನಾಡಬೇಕೆಂದು ಇದ್ದರೆ ದಯವಿಟ್ಟು ನನ್ನ ಕೊಠಡಿಗೆ ಬನ್ನಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಅದು ಬಹಳ ಮುಖ್ಯವಾದ ವಿಚಾರ. ತಾವು ದಯವಿಟ್ಟು.....

ಅಧ್ಯಕ್ಷರು.—ನೀವು ಈ ವಿಚಾರದಲ್ಲಿ ಏನಾದರೂ ಹೇಳುವುದಿದ್ದರೆ ದಯವಿಟ್ಟು ನನ್ನ ಕೊಠಡಿಗೆ ಬಂದು ಹೇಳಿ. ಈಗ ದಯವಿಟ್ಟು ನನಗೆ ಸಹಕಾರ ನೀಡಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಾನು ಹೇಳುವುದನ್ನು ತಾವು ಕೇಳಿ.....

ಅಧ್ಯಕ್ಷರು.—ಈಗಾಗಲೇ ನಾನು ಅದನ್ನು ಕನ್ಸರ್ಟ್ ಮಾಡಿದ್ದೇನೆ. ನಾನು ಏನು ರೂಲಿಂಗ್ ಕೊಟ್ಟಿದ್ದೇನೆ, ಅದನ್ನೂ ಕೂಡ ತಾವು ನೋಡಿ. ತಾವು ಹೊಸ ಸದಸ್ಯರು. ದಯವಿಟ್ಟು ಸದನದ ನಿಯಮಾವಳಿಗಳನ್ನು ಒಮ್ಮೆ ಓದಿ ನೋಡಿಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನಿಯಮ ೫೯ ಏನು ಎಂಬುದನ್ನು ನಾನು ನೋಡಿದ್ದೇನೆ. ಈಗ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ನಾನು ಮಾತನಾಡುತ್ತಿದ್ದೇನೆ.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಮುಗಿದು ಬಹಳ ಹೊತ್ತಾಯಿತು. ಈಗ ಗಮನಸೆಳೆಯುವ ಪ್ರಶ್ನೆಯನ್ನೂ ಮುಗಿಸಿ ಮುಂದೆ ನಿಯಮ ೩೩೪ ನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ವೇಳೆ ೧ ಗಂಟೆಕಾಲ ಇರುತ್ತದೆ. ಆ ಸಂದರ್ಭದಲ್ಲಿ ಯಾವ ಯಾವ ಸದಸ್ಯರು ಇಲ್ಲಿ ಇರಲಿಲ್ಲವೋ ಅವರ ಹೆಸರುಗಳನ್ನೆಲ್ಲಾ ಮತ್ತೊಮ್ಮೆ ದಯವಿಟ್ಟು ಕರೆಯಿರಿ. ಇನ್ನೂ ಕಾಲಾವಕಾಶ ಇದೆ. ಪ್ರಶ್ನೆಯನ್ನು ಕೇಳಿರತಕ್ಕ ಸದಸ್ಯರ ಹೆಸರುಗಳನ್ನು ಮತ್ತೊಮ್ಮೆ ಕರೆಯಲು ತಮಗೆ ಅವಕಾಶ ಇದೆ. ದಯವಿಟ್ಟು ನಮಗೆ ಅವಕಾಶ ನೀಡಿ.

ಅಧ್ಯಕ್ಷರು.—ನಾನು ಉದ್ದೇಶಪೂರ್ವಕವಾಗಿ ಆ ರೀತಿ ಮಾಡಿಲ್ಲ. ಪ್ರಶ್ನೋತ್ತರಗಳು ಕೇವಲ ೨–೩ ನಿಮಿಷದಲ್ಲಿ ಮುಗಿದು ಹೋಯಿತು, ತಾವು ಹೊರಗೆ ಹೋದವರು ೨–೩ ನಿಮಿಷದಲ್ಲಿ ವಾಪಸು ಬರುತ್ತೀರೆಂದು ನಾನು ನೋಡಿದೆ. ಆದರೆ ನೀವು ಬರಲಿಲ್ಲ. ಆದ್ದರಿಂದ ನಿಮ್ಮ ಛಾನ್ಸ್ ಮುಗಿದು ಹೋಯಿತು. ಕೇವಲ ನಿಮ್ಮದು ಮಾತ್ರವಲ್ಲ. ಮಾನ್ಯ ಉಪಾಧ್ಯಕ್ಷರೂ ಕೂಡ ಅವರ ಒಂದು ವರದಿಯನ್ನು ಸಭೆಯ ಮುಂದೆ ಇಡಬೇಕಾಗಿತ್ತು. ಅವರೂ ಕೂಡ ಆಗ ಸದನದಲ್ಲಿ ಇರಲಿಲ್ಲ. ಅವರ ಛಾನ್ಸ್ ಹೋಯಿತು. ಇದಕ್ಕೆ ನಾನು ಏನೂ ಮಾಡುವುದಕ್ಕೆ ಬರುವುದಿಲ್ಲ. ಮತ್ತೆ ನಾನು ಹಿಂದಕ್ಕೆ ಹೋಗುವುದಕ್ಕಾಗುವುದಲ್ಲ.

ನಿಯಮ ೩೩೪ರ ಪ್ರಕಾರ

ಕಾಲೇಜು ವಿದ್ಯಾರ್ಥಿ ಸಂಘಗಳ ಚುನಾವಣೆ.

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಿಲ್ಲಿಸಿಬಿಟ್ಟಿರುವ ಹಿನ್ನೆಲೆಯನು? ಈಗಾಗಲೇ ಕೆಲವು ಕಾಲೇಜುಗಳಲ್ಲಿ ಈ ಚುನಾವಣಾ ವಿಚಾರದಲ್ಲಿ ವಿದ್ಯಾರ್ಥಿಗಳು ತಮ್ಮ ಬೇಡಿಕೆ ಬಗ್ಗೆ ಮುಷ್ಕರ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಚುನಾವಣೆಯ ಮಟ್ಟಿಗೆ ಮುಷ್ಕರ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ಅನಾವಶ್ಯಕವಾಗಿ ತಪ್ಪು ಕಲ್ಪನೆಯನ್ನು ರೂಪಿಸಿ, ವಿದ್ಯಾರ್ಥಿಗಳ ಮೇಲೆ ಪೋಲೀಸರ ಮುಖಾಂತರ ಶೀಘ್ರವಾದ ಒತ್ತಡವನ್ನು ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಸರಕಾರ ವಿದ್ಯಾರ್ಥಿಗಳ ನ್ಯಾಯ ಯುತವಾದ ಬೇಡಿಕೆಯನ್ನು ಈಡೇರಿಸದೆ ಈರೀತಿಯಾದ ಪೋಲೀಸರಿಂದ ಒತ್ತಡ ತರುವಂಥ ಕಾರ್ಯಕ್ರಮವನ್ನು ನಿಲ್ಲಿಸುತ್ತಿದೆಯೇ ಎನ್ನುವ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ ?

ಶ್ರೀ ಎಂ.ರಘುಪತಿ (ಮಾನ್ಯ ವಿದ್ಯಾ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ಚುನಾವಣೆಗಳು ನಡೆಯಬೇಕು. ಇದು ಶಾಲೆಗಳಲ್ಲಾಗಲಿ, ಕಾಲೇಜುಗಳಲ್ಲಾಗಲಿ

ನಾನು ಹಲವಾರುಸಾರಿ ಏನು ಹೇಳಿದ್ದೇನೆಂದರೆ, ಚುನಾವಣೆಗಳು ಶಾಂತಿಯುತವಾಗಿ, ನ್ಯಾಯ ಬದ್ಧವಾಗಿ ನಡೆಯಬೇಕು ಎಂದು. ಕೆಲವು ಕಾಲೇಜುಗಳಲ್ಲಿ ಚುನಾವಣೆಗಳನ್ನು ನಿಲ್ಲಿಸಿದ್ದಾರೆಂದು ತಾವು ಹೇಳಿದಿರಿ. ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಅವರಿಗೆ ಏನಾದರೂ ಇದರಲ್ಲಿತೊಂದರೆ, ತೊಡಕು ಇದ್ದರೆ ಅವುಗಳನ್ನು ನಿವಾರಣೆ ಮಾಡಿ ಸೌಹಾರ್ದಯುತ ವಾತಾವರಣವನ್ನು ನಿರ್ಮಾಣ ಮಾಡಲು ನಾನು ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ.

(ii) ಕಂದುರೆವೋತಿ ಪ್ರಕರಣವನ್ನು ಬಯಲಿಗೆಳೆದ ಅಲ್ಲಮಪ್ರಭು ಬೆಟದೂರ ಇವರಿಗೆ ಗೂಂಡಾಗಳಿಂದ ಕಿರುಕುಳ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಯಾಲಬುರ್ಗ ತಾಲೂಕಿನ ಕುದುರೆ ಮೋತಿಯಲ್ಲಿ ಮಹಿಳೆಯೋರ್ವಳ ಮೇಲೆ ನಡೆದ ಅಮಾನುಷ ಅತ್ಯಾಚಾರ ಎಲ್ಲರಿಗೂ ಈಗಾಗಲೇ ತಿಳಿದಿರುವ ವಿಚಾರ.

ಈ ಪ್ರಕರಣವನ್ನು ಬಯಲಿಗೆಳೆದು ಅತ್ಯಾಚಾರದ ಬಗ್ಗೆ ಜನಾಭಿಪ್ರಾಯವನ್ನು ಸಂಘಟಿಸುವಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಮಹಾವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಅಲ್ಲಮಪ್ರಭು ಬೆಟದೂರ ಅವರು ತೀಕ್ಷ್ಣಗಣ್ಯ ಪಾತ್ರವಹಿಸಿದ್ದಾರೆ. ಕುದುರೆಮೋತಿ ಮಠದ ಸ್ವಾಮಿಯ ಹಲವಾರು ಗೂಂಡಾ ಬೆಂಬಲಿಗರು ಈಗ ಅಲ್ಲಮಪ್ರಭು ಬೆಟದೂರು ಅವರಿಗೆ ಪ್ರಾಣಭಯದ ಬೆದರಿಕೆ ಹಾಕಿದ್ದಾರೆಂದು ತಿಳಿದು ಬಂದಿದೆ. ಅದರಂತೆ ಕೊಪ್ಪಳದ ಹಲವು ಎ.ಐ.ಎಸ್.ಎಫ್. ಕಾರ್ಯ ಕರ್ತರಿಗೂ ಗೂಂಡಾಗಳು ಬೆದರಿಕೆ ಹಾಕಿರುವ ವರದಿಗಳು ಬಂದಿವೆ.

ಅಲ್ಲಮಪ್ರಭು ಬೆಟದೂರರು ನಾಡಿನ ತರುಣ ಪುರೋಗಾಮಿ ಸಾಹಿತಿಗಳಲ್ಲಿ ಓರ್ವರು. ಕ್ರಿಯಾಶೀಲ ಬರಹಗಾರರಾದ ಅವರು ಬಂಡಾಯ ಸಾಹಿತಿಯೂ ಆಗಿದ್ದು, ಅವರ ಜೀವಕ್ಕೆ ಒದಗಿರುವ ಅಪಾಯದಿಂದ ನನ್ನನ್ನು ಅತ್ಯಂತ ಕಳವಳಕ್ಕೆ ಈಡು ಮಾಡಿದೆ. ಅವರ ನೌಕರಿಯನ್ನು ಕೊನೆಗೊಳಿಸುವ ಪಿತೂರಿ ಸಹ ನಡೆದಿದೆಯೆಲ್ಲದೆ ಅವರನ್ನು ಹೋದಲ್ಲೆಲ್ಲಾ ಗೂಂಡಾಗಳು ಹಿಂಬಾಲಿಸುತ್ತಿದ್ದಾರೆ. ಅವರಿಗೆ ಈ ಕೂಡಲೇ ಸರ್ವತರದ ರಕ್ಷಣೆಯನ್ನು ಪೋಲೀಸ್ ಇಲಾಖೆ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಗೃಹ ಸಚಿವರ ಗಮನವನ್ನು ನಾನು ಈ ಮೂಲಕ ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರತಕ್ಕಂಥ ವಿಚಾರವು ನನ್ನ ಗಮನಕ್ಕೆ ಬಂದಿದ್ದು, ಅದನ್ನು ನೋಡಲಾಗಿದೆ. ಅವರಿಗೆ ಸಂಪೂರ್ಣವಾದ ರಕ್ಷಣೆಯನ್ನು ಕೊಡುತ್ತೇನೆ.

(iii) ಉಳ್ಳಾಲ ಕ್ಷೇತ್ರದಲ್ಲಿ ಸರ್ಕಾರಿ ಜಾಗಗಳಲ್ಲಿ ಮನೆಕಟ್ಟಿಕೊಂಡಿರುವ ಬಡವರಿಗೆ ಹಕ್ಕುಪತ್ರಗಳನ್ನು ಕೊಡದಿರುವುದು

ಶ್ರೀ ಬಿ.ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ಉಳ್ಳಾಲ ಕ್ಷೇತ್ರದಲ್ಲಿ ಅನೇಕ ಗ್ರಾಮಗಳಲ್ಲಿ ಹತ್ತು ಹದಿನೈದು ವರ್ಷಗಳಿಂದ ಸರ್ಕಾರಿ ಜಾಗಗಳಲ್ಲಿ ನಿವೇಶನ ಇಲ್ಲದ ತೀರಾ ಬಡವರು ಮನೆ ಕಟ್ಟಿಕೊಂಡು ವಾಸ ಮಾಡುತ್ತಾ ಬಂದಿದ್ದಾರೆ. ಸೋಮೇಶ್ವರ ಗ್ರಾಮದ ಕಾಟಂಗಾರಿನಲ್ಲಿರುವ ಸೈಟಿನವರು, ಉಳ್ಳಾಲದ ಅಕ್ಕರೆಕೆರೆ ಸೈಟಿನವರು, ಬೆಳ್ಮವಾಣಿನಾಡಿ, ಸಾವೂರು, ಬೊಳಿಯಾರ್, ಹಳೇಕಳ, ಅಂಬ್ಲಮೊಗ್ರು, ಮೊದಲಾದ ಗ್ರಾಮಗಳಲ್ಲಿ ನೂರಾರು ಬಡವರು ಮನೆಕಟ್ಟಿಕೊಂಡು ವಾಸವಾಗಿರುತ್ತಾರೆ. ಅವರಿಗೆ ಇನ್ನೂ ಹಕ್ಕುಪತ್ರಗಳನ್ನು ಕೊಟ್ಟಿರುವುದಿಲ್ಲ. ಆದ ಕಾರಣ ಈ ರೀತಿ ಮನೆಕಟ್ಟಿಕೊಂಡು ವಾಸ ಮಾಡಿಕೊಂಡಿರುವ ಬಡವರಿಗೆ ಹಕ್ಕುಪತ್ರಗಳನ್ನು ಕೊಡಲು ಶೀಘ್ರ ವ್ಯವಸ್ಥೆ ಮಾಡಬೇಕೆಂಬ ಕುರಿತು ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಸಚಿವರಿಗೆ ಈ ವಿಚಾರವನ್ನು ತಿಳಿಸಿ ಪರಿಹಾರ ಒದಗಿಸಿಕೊಡುವ ಬಗ್ಗೆ ಅವರ ಗಮನಕ್ಕೆ ವಿಷಯವನ್ನು ತಂದು ಯೋಗ್ಯ ಪರಿಹಾರ ಕೊಡುವ ವ್ಯವಸ್ಥೆಯನ್ನು ಮಾಡಿಸುತ್ತೇನೆ.